# 2014-15 ನೇ ಸಾಲಿನ ರಾಜ್ಯವಲಯ ಯೋಜನೆಯ

## ಅನುಷ್ಠಾನದ ಮಾರ್ಗಸೂಚಿಗಳು:-

**I.ಯೋಜನೆಯ ಹೆಸರು : ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ (S-13)**

**II. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು:**

ತೋಟಗಾರಿಕೆ ಇಲಾಖೆಯು ರಾಜ್ಯದಲ್ಲಿ ಒಟ್ಟು 410 ಕ್ಷೇತ್ರ ಮತ್ತು ಸಸ್ಯಾಗಾರಗಳನ್ನು ಹೊಂದಿದ್ದು, ಇವುಗಳ ಒಟ್ಟಾರೆ ಪ್ರದೇಶ 17532 ಎಕರೆಗಳಾಗಿರುತ್ತದೆ. ಈ ಕ್ಷೇತ್ರಗಳನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಿ ಸಂಪನ್ಮೂಲ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲು 2008-09ನೇ ಸಾಲಿನಲ್ಲಿ ವಿಶೇಷ ಉದ್ದೇಶಕ ವಾಹಕವಾಗಿ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿಯನ್ನು ಸ್ಥಾಪಿಸಲಾಗಿದೆ. ಈ ಯೋಜನೆಯು ರೈತರಿಗೆ ಮತ್ತು ಸಾರ್ವಜನಿಕರಿಗೆ ವಿವಿಧ ತೋಟಗಾರಿಕೆ ಬೆಳೆಗಳನ್ನು ಪರಿಚಯಿಸುವ ಜೊತೆಗೆ ಯೋಗ್ಯ ದರದಲ್ಲಿ ಉತ್ತಮ ಗುಣಮಟ್ಟದ ಬೀಜ ಮತ್ತು ಸಸಿಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿರುತ್ತದೆ.

**III. ಯೋಜನೆಯ ಉದ್ದೇಶಗಳು:**

1. RKVY ಯೋಜನೆಯಡಿ ಬರುವ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿಕೆ ಕ್ಷೇತ್ರಗಳಲ್ಲಿ ಮಾವು/ಸೀಬೆ/ಸೀತಾಫಲ/ನೇರಳೆ/ಪನ್ನೇರಳೆ/ಬೇಲ/ಲಿಚ್ಛಿ/ದಾಳಿಂಬೆ/ಅಂಜೂರಗೂಟಿ/ ಹಲಸು/ಹುಣಸೆ/ ಪಾಲ್ಸ/ಹೂ ಬೆಳೆಗಳ ಬೀಜೋತ್ಪಾದನೆ/ಅಲಂಕಾರಿಕ ಗಿಡಗಳೂ ಹಾಗೂ ಪ್ರಧಾನ ಹಣ್ಣಿನ ಗಿಡಗಳನ್ನು ಅಭಿವೃದ್ಧಿ ಹೊಂದಿರುವ ಪ್ರದೇಶಗಳಲ್ಲಿ ಬೆಳೆಯುವುದು ಮುಖ್ಯ ಉದ್ದೇಶವಾಗಿರುತ್ತದೆ.
2. ಉತ್ಕೃಷ್ಟ ಗುಣಮಟ್ಟದ ಕಸಿ/ಸಸಿಗಳನ್ನು ಉತ್ಪಾದಿಸಿ ಇಲಾಖಾ ದರದಲ್ಲಿ ರೈತರಿಗೆ ವಿತರಣೆ ಮಾಡುವುದು.
3. ಉತ್ತಮ ರೀತಿಯಲ್ಲಿ ಕ್ಷೇತ್ರಗಳ ನಿರ್ವಹಣೆ ಮಾಡುವುದು.

**IV. ಯೋಜನೆಯ ಮುಖ್ಯ ಘಟಕ ಕಾರ್ಯಕ್ರಮಗಳು:**

1. **ಸಸ್ಯಾಭಿವೃದ್ಧಿ ಮತ್ತು ಪಾಲನೆ** :

   RKVY ಯೋಜನೆಯಡಿ ಬರುವ ಕ್ಷೇತ್ರವನ್ನು ಹೊರತುಪಡಿಸಿ ಉಳಿಕೆ ಕ್ಷೇತ್ರಗಳಲ್ಲಿ ಅಪ್ರಧಾನ ಹಣ್ಣಿನ ಬೆಳೆಗಳು, ಪ್ಲಾಂಟೇಷನ್ ಮತ್ತು ಸಾಂಬಾರು ಬೆಳೆಗಳು ಹಾಗೂ ಮುಂದಿನ ದಿನಗಳಲ್ಲಿ ಬೇಡಿಕೆ ಇರುವ ಹಣ್ಣಿನ ಬೆಳೆಗಳ ಸಸ್ಯೋತ್ಪಾದನೆಯನ್ನು ಈ ಘಟಕದಡಿ ಕೈಗೊಳ್ಳಲಾಗುವುದು. ಈ ಬಾಬ್ತಿಗಾಗಿ ರೂ.50.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.

2. **ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ನಿರ್ವಹಣೆ** :

   1. ಇಲಾಖೆಯು ನಿಗಧಿಪಡಿಸಿರುವ ದರದಲ್ಲಿ (ಎಸ್.ಆರ್. ದರದ ಪ್ರಕಾರ) ಕ್ಷೇತ್ರ / ನರ್ಸರಿಗಳಲ್ಲಿರುವ ಹಣ್ಣಿನ ಗಿಡಗಳಿಗೆ ಪಾತಿ ಮಾಡಿಸುವುದು, ಕಳೆ ನಿಯಂತ್ರಣ, ನೀರಾವರಿ, ಜೈವಿಕ ಪರಿಕರಗಳ ಉತ್ಪಾದನೆ ಇತ್ಯಾದಿ ಕಾರ್ಯಗಳನ್ನು ಕೈಗೊಳ್ಳುವುದು.
   2. ಗೊಬ್ಬರ, ಜೈವಿಕ ಪರಿಕರಗಳ ಉತ್ಪಾದಿಸಿ/ಸಕಾಲದಲ್ಲಿ ಖರೀದಿಸಿ ಕ್ಷೇತ್ರ/ ಸಸ್ಯಾಗಾರಗಳಲ್ಲಿರುವ ಗಿಡಗಳಿಗೆ ಹಾಕಿ ಸಂರಕ್ಷಿಸುವುದು. ಈ ಬಾಬ್ತಿಗೆ ರೂ.150.00 ಲಕ್ಷಗಳನ್ನು ನಿಗಧಿಪಡಿಲಾಗಿದೆ.

**V.ಅನುದಾನ :**

1. ಸಸ್ಯಾಭಿವೃದ್ಧಿ ಮತ್ತು ಪಾಲನೆ - ರೂ.50.00 ಲಕ್ಷಗಳನ್ನು ನಿಗಧಿಪಡಿಸಿದೆ.
2. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ನಿರ್ವಹಣೆ - ರೂ.150.00 ಲಕ್ಷಗಳನ್ನು ನಿಗಧಿಪಡಿಸಿದೆ.

ಒಟ್ಟು ಅನುದಾನ ರೂ.200.00 ಲಕ್ಷಗಳು.

**VI. ತಾಂತ್ರಿಕ ವೈಶಿಷ್ಟತೆಗಳು ಹಾಗೂ ಅನುಷ್ಠಾನ:**

**ಸಸ್ಯಾಭಿವೃದ್ಧಿ**:

1. ಸಸ್ಯೋತ್ಪಾದನೆಗೆ ನಿಗಧಿಪಡಿಸಿರುವ ಇಲಾಖಾ ದರಪಟ್ಟಿಯನ್ನು ಮೀರದಂತೆ ಸಸ್ಯೋತ್ಪಾದನೆ ಕೈಗೊಳ್ಳಬೇಕು.
2. ಕಸಿ ಗಿಡ ಅಭಿವೃದ್ಧಿಪಡಿಸಲು ಉದ್ದೇಶಿತ ಸಂದರ್ಭದಲ್ಲಿ ಕೇವಲ ಮೃದು ಕಾಂಡ ಕಸಿ ಅಭಿವೃದ್ಧಿಪಡಿಸಲು ಮಾತ್ರ ಕ್ರಮ ತೆಗೆದುಕೊಳ್ಳುವುದು.
3. ಕಸಿ/ಸಸಿಗಳನ್ನು ಸರಿಯಾದ ತಾಂತ್ರಿಕ ವಿಧಾನ ಅನುಸರಿಸಿ ವೃದ್ಧಿಸಬೇಕು.
4. ಮಾವು ಕಸಿಯನ್ನು ಓಟೆ ಕಸಿ ಅಥವಾ ಮೃದುಕಾಂಡ ಕಸಿಯ ಮುಖಾಂತರ ಕೈಗೊಳ್ಳಲು ಮಾವಿನ ಓಟೆಗಳನ್ನು ಮಡಿಗಳಲ್ಲಿ ಬಿತ್ತನೆ ಮಾಡುವಾಗ ಹೆಚ್ಚಾಗಿ ಮರಳನ್ನು ಮಿಶ್ರಣ ಮಾಡಿ ಶೇಕಡವಾರು ಹೆಚ್ಚಿನ ಮೊಳಕೆ ಸಸಿ ಪಡೆಯಬೇಕು.
5. ಉತ್ಪಾದಿಸಿದ ಕಸಿ ಗಿಡಗಳನ್ನು ತಳಿವಾರು ಸೂಚಿತ ಬಣ್ಣ ಹಾಕಿ ಜೋಡಿಸಿಡಬೇಕು.
6. ಉತ್ಪಾದಿಸಿದ ಕಸಿ ಗಿಡಗಳ ಸಂಖ್ಯೆ ಹಾಗೂ ಆ ಗಿಡಗಳ ಮಾರಾಟದಿಂದ ಬಂದ ಆದಾಯ ಹೊಂದಾಣಿಕೆಯಾಗಬೇಕು.
7. ಗುಣಮಟ್ಟದ ಕಸಿ/ಸಸಿಗಿಡಗಳನ್ನು ಮಾತ್ರ ರೈತರಿಗೆ ವಿತರಿಸಿ ಬಿಲ್ಲು ಹಾಕಿ ದಾಸ್ತಾನು ಪುಸ್ತಕದಲ್ಲಿ ನಮೂದಿಸಬೇಕು.
8. ಆಯಾ ವರ್ಷದಲ್ಲಿ ವೃದ್ಧಿಸಿರುವ ಕಸಿ ಗಿಡಗಳನ್ನು ಅದೇ ವರ್ಷದಲ್ಲಿ ರೈತರಿಗೆ ನಾಟಿ ಮಾಡಲು ಪೂರೈಕೆ ಮಾಡಬಾರದು. ಕನಿಷ್ಟ 6 ತಿಂಗಳು ಅವು ನರ್ಸರಿಯಲ್ಲಿ ಬಲಿತು ಚಿಗುರೊಡೆದ ನಂತರ ಮಾರಾಟ ಮಾಡುವುದು.
9. ಸ್ಥಳೀಯವಾಗಿ ಬೇಡಿಕೆ ಇರುವ ತಳಿಗಳನ್ನು ಮಾತ್ರ ವೃದ್ಧಿಸಬೇಕು. ವೃದ್ಧಿಸಿದ ಗಿಡ ಮಾರಾಟವಾಗುವಂತಿರಬೇಕು.
10. ಸ್ಥಳೀಯ ವೈವಿಧ್ಯತೆಗಳಿಗುಣವಾಗಿ ಘಟಕ ವೆಚ್ಚದಲ್ಲಿ ಸಣ್ಣ ಬದಲಾವಣೆಗಳೇನಾದರೂ ಇದ್ದರೆ ಅವುಗಳನ್ನು ಒಪ್ಪಿಕೊಳ್ಳಲಾಗುವುದು. ಆದಾಗ್ಯೂ ಯಾವುದೇ ಕಾರಣಕ್ಕೂ ಎಂ.ಪಿ.ಕ್ ನಲ್ಲಿ ನಿಗಧಿಪಡಿಸಿದ ಒಟ್ಟು ವೆಚ್ಚದ ಹಾಗೂ ಭೌತಿಕ ಗುರಿಗಳ ಮಿತಿಯಲ್ಲಿ ಈ ಬದಲಾವಣೆಗಳನ್ನು ಅಳವಡಿಸಿಕೊಳ್ಳಬೇಕು.

**ನಿರ್ವಹಣೆ**:

1. ವರ್ಷದಲ್ಲಿ ಎರಡು ಬಾರಿ ಉಳುಮೆ ಮಾಡುವುದು.
2. ಎಲ್ಲಾ ಕ್ಷೇತ್ರಗಳನ್ನು ಸಾವಯುವ ಕೃಷಿಗೆ ಪರಿವರ್ತಿಸಿ, ಸಾವಯುವ ಕೃಷಿ ಕ್ರಮಗಳನ್ನು ಕೈಗೊಳ್ಳಬೇಕು. ಸಾವಯುವ ಗೊಬ್ಬರ, ಎಲೆ-ಒಣಗಿದ ಕಡ್ಡಿ, ಗರಿಗಳನ್ನು ಗಿಡಗಳ ಬುಡದಲ್ಲಿ ಹೊದಿಕೆಯಾಗಿ ಅಳವಡಿಸುವುದು. ಹೊದಿಕೆ ಮೇಲೆ ಬಯೋಡೈಜೆಸ್ಟರ್‌ನ ಜೀವಸಾರವನ್ನು ತಿಂಗಳಿಗೊಮ್ಮೆ ಸಿಂಪಡಿಸಬೇಕು.
3. ಅರ್ಧ ಚಂದ್ರಾಕೃತಿ ಬಂದುಗಳು, catch pit ಹಾಗೂ ತಾಕುಗಳಿಗೆ ಬದುಗಳನ್ನು ನಿರ್ಮಾಣ ಮಾಡುವ ಮೂಲಕ ನೀರಿನ ಸಂಗ್ರಹಣೆ ಮಾಡುವುದು.
4. ಸೂಕ್ತ ಸ್ಥಳದಲ್ಲಿ ಕೃಷಿಹೊಂಡ, ನಾಲಾಬದು, ಚೆಕ್ ಡ್ಯಾಂ ನಿರ್ಮಿಸಿ, ಮಳೆನೀರು ಸಂಗ್ರಹಿಸಿ, ಭೂ ಜಲ ಸಂಪನ್ಮೂಲಗಳನ್ನು ಮಾಡುವುದು.
5. ಒಣಗಿದ, ಹಳೆಯ ಮತ್ತು ಫಲ ಬಿಡದ ಗಿಡಗಳನ್ನು ತೆಗದು ಹೊಸ ಗಿಡಗಳನ್ನು ನೆಡಬೇಕು.
6. ಬಯೋಪೆಸ್ಟಿಸೈಡ್ ಸಿಂಪರಣೆ ಮಾಡುವುದು.
7. ಪಂಪ್‌ಸೆಟ್ ರಿಪೇರಿ ಇತ್ಯಾದಿ ಕೆಲಸಗಳನ್ನು ಕೈಗೊಳ್ಳುವುದು.

## VII.ಅನುಷ್ಠಾನ ವೇಳಾಪಟ್ಟಿ:

**ಸಸ್ಯಾಭಿವೃದ್ಧಿ:**

- ಮಾವು ಸಸ್ಯಾಭಿವೃದ್ಧಿಗೆ ಅಗತ್ಯ ಪರಿಕರಗಳಾದ ಮಾವಿನ ಓಟೆ, ಪಾಲಿಬ್ಯಾಗ್, ಮಣ್ಣು, ಮರಳು ಇತ್ಯಾದಿಗಳನ್ನು ಮೇ- ಜೂನ್ 2ನೇ ವಾರದಲ್ಲಿ ಸಂಗ್ರಹಿಸುವುದು.
- ಮಾವು ಮತ್ತು ಇತರೆ ಸಸಿಗಳ/ಕಸಿಗಳ ಅಭಿವೃದ್ಧಿಗೆ ಇತರೆ ಅಗತ್ಯ ಪರಿಕರಗಳಾದ ಪಾಲಿಬ್ಯಾಗ್, ಕೊಟ್ಟಿಗೆ ಗೊಬ್ಬರ, ಮಣ್ಣು, ಮರಳು, ಮರದ ಪುಡಿ ಇತ್ಯಾದಿಗಳನ್ನು ಜೂನ್ 2ನೇ ವಾರದಲ್ಲಿ ಸಂಗ್ರಹಿಸುವುದು.
- ತೆಂಗು ಸಸ್ಯಾಭಿವೃದ್ಧಿಗೆ ಆಯ್ದ ತೆಂಗಿನ ತಾಯಿ ಮರಗಳಿಂದ ತೆಂಗು ಬೀಜಗಳನ್ನು ನವೆಂಬರ್ ಮೊದಲ ವಾರದಲ್ಲಿ ಸಂಗ್ರಹಿಸಲು ಅಗತ್ಯ ಕ್ರಮ ಕೈಗೊಳ್ಳುವುದು.
- ಕೋಕೋ ಸಸಿಗಳ ಉತ್ಪಾದನೆಗೆ ಅಗತ್ಯ F-1 Hybrid ಬೀಜಗಳನ್ನು ಮೇ 2 ಮತ್ತು 4ನೇ ವಾರದಲ್ಲಿ ಸಂಗ್ರಹಿಸುವುದು.
- ಕಾಳು ಮೆಣಸು ಸಸ್ಯಾಭಿವೃದ್ಧಿಗೆ ಅಗತ್ಯ ಕಟಿಂಗ್ಸ್‌ಗಳನ್ನು ಜೂನ್ 2ನೇ ವಾರದಲ್ಲಿ ಸಂಗ್ರಹಿಸುವುದು.

**ನಿರ್ವಹಣೆ:**

- ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹಸಿರೆಲೆ ಗೊಬ್ಬರ ಬೀಜ ಖರೀದಿಸಿ, ಉಳುಮೆ ಮಾಡಿ, ಬಿತ್ತನೆ ಮಾಡುವುದು, ಗಿಡಗಳಿಗೆ ಪಾತಿ ಮಾಡುವುದು ಇತ್ಯಾದಿಗಳನ್ನು ಮೇ - ಜೂನ್ ಮಾಹೆಯಲ್ಲಿ ಕೈಗೊಳ್ಳುವುದು.
- ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯಗಳಾದ ವರ್ಮಿಕಾಂಪೋಸ್ಟ್ / ಬಯೋಡೈಜೆಸ್ಟರ್, ಕಾಂಪೌಂಡ್‌ಗೋಡೆ, ತಂತಿಬೇಲಿ, ನೀರು ಸಂಗ್ರಹಣಾ ಘಟಕಗಳು ಇತ್ಯಾದಿ ಕೆಲಸಗಳನ್ನು ಜೂನ್ ಆಗಸ್ಟ್ ಮಾಹೆಯಲ್ಲಿ ಕೈಗೊಳ್ಳುವುದು.

- ಕ್ಷೇತ್ರಗಳಲ್ಲಿರುವ ಗೋಡೌಸ್ , ಫಾರಂಹೌಸ್ ಇತ್ಯಾದಿ ರಿಪೇರಿ ಕಾರ್ಯವನ್ನು ಆಗಸ್ಟ್ ಮಾಹೆಯ ಅಂತ್ಯದೊಳಗೆ ಕೈಗೊಳ್ಳುವುದು.

ಘಟಕಗಳ ಅನುಷ್ಠಾನವನ್ನು ಈ ಮೇಲೆ ನಿಗದಿಪಡಿಸಿರುವ ಅನುಷ್ಠಾನ ವೇಳಾಪಟ್ಟಿಯಂತೆ ಮತ್ತು MPIC ಅನುಸಾರ ಅನುಷ್ಠಾನಗೊಳಿಸತಕ್ಕದ್ದು. ತಪ್ಪಿದಲ್ಲಿ ಸಂಬಂಧಪಟ್ಟ ಹಿಸತೋನಿ (ರಾವ) ಹಾಗೂ ತೋಉನಿ (ಜಿಪಂ) ರವರು ವೈಯುಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ.

**VIII.ಅನುಬಂಧಗಳು:**

1) ಕ್ರಿಯಾ ಯೋಜನೆ-2014-15
2) ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಆದೇಶ:
3) ಪ್ರತಿ ಮಾಹೆಯ ಪ್ರಗತಿ ವರದಿ ಸಲ್ಲಿಸುವ ನಮೂನೆ:

**IX. Reporting and documentation (ವರದಿ ಮಾಡುವುದು ಮತ್ತು ದಾಖಲೆಗಳನ್ನು ನಿರ್ವಹಿಸುವುದು).**

1. ಪ್ರತಿ ಮಾಹೆಯ ಪ್ರಗತಿ ವರದಿಯನ್ನು ಇ-ಮೇಲ್ ಮೂಲಕ ತಿಂಗಳ 3ನೇ ದಿನಾಂಕದ ಒಳಗಾಗಿ ತಪ್ಪದೇ ಸಲ್ಲಿಸುವುದು.
2. ಗುಣಮಟ್ಟದ ಕಸಿ/ಸಸಿಗಿಡಗಳನ್ನು ಮಾತ್ರ ರೈತರಿಗೆ ವಿತರಿಸಿ ಬಿಲ್ಲು ಹಾಕಿ ದಾಸ್ತಾನು ಪುಸ್ತಕದಲ್ಲಿ ನಮೂದಿಸಬೇಕು.
3. ಪ್ರತಿ ಮಾಹೆ ಮಾರಾಟವಾಗಿ ಕ್ಷೇತ್ರಗಳಲ್ಲಿ ಉಳಿಕೆಯಾಗುವ ಕಸಿ/ಸಸಿಗಳ ವಿವರಗಳನ್ನು ಸಲ್ಲಿಸುವುದು.
4. ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ GPS ಮುಖಾಂತರ ಛಾಯಾ ಚಿತ್ರವನ್ನು ತೆಗೆದು ವರದಿಯೊಂದಿಗೆ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

**ತೋಟಗಾರಿಕೆ ನಿರ್ದೇಶಕರು.**